ಎಸ್‌ಸಿಸಿಹೆಚ್-09 ಸಿಸಿ ನಂ. 1497/2020

ಪಿಡಬ್ಲೂ.1: ಶಿವರಾಜ ಎನ್.ಎನ್

**ದಿನಾಂಕಃ 18.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಕೆ.ಎನ್. ಗೌಡ್ರು ಪ್ರಾವಿಜನ್ ಸ್ಟೋರ್ ನ ಮಾಲೀಕ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರಿಕೆಯಲ್ಲಿ ನಮೂದಿಸಿರುವ ವಿಳಾಸ ಅಂಗಡಿಯ ವಿಳಾಸವಾಗಿರುತ್ತದೆ. ಅಂಗಡಿ ಮಾಲೀಕ ಎಂದು ತೋರಿಸಲು ದಾಲೆಗಳನ್ನು ಹಾಜರುಪಡಿಸಿದ ಕಾರಣ ನಿಮಗೆ ಆರೋಪಿಯ ವಿರುದ್ದ ದೂರು ದಾಖಲಿಸಲು ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ.

**2.** ಶಿವರಾಜು ಎಂಬ ಹೆಸರಿನಲ್ಲಿ ಚೆಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಅಂಗಡಿಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಈ ದಾಖಲೆಯಲ್ಲಿ ನಮೂದಿಸಿರುವ ವಿಳಾಸಕ್ಕೆ ಆರೋಪಿಗೆ ನೋಟೀಸು ನೀಡಿದ್ದೀರಾ ಎಂದರೆ ಸಾಕ್ಷಿಯು ನೀಡಿರುವುದಿಲ್ಲ ಎಂದು ನುಡಿದು ಮುಂದುವರೆದು ಆ ವಿಳಾಸವನ್ನು ಆರೋಪಿ ನನಗೆ ನೀಡಿರಲಿಲ್ಲ, ಪಿಜಿ ವಿಳಾಸವನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಪಿಜಿ ವಿಳಾಸ ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು ಈಗ ನೆನಪಿರುವುದಿಲ್ಲ, ಅದ ವಿಳಾಸವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನ್ಯಾಯಾಲಯಕ್ಕೆ ಪುಸ್ತಕವನ್ನು ಹಾಜರುಪಡಿಸುತ್ತೇನೆ ಎಂದು ಈ ಹಿಂದೆ ನುಡಿದಿದ್ದು ಅದನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ಸಾಕ್ಷಿಯು ಸುಮಾರು 9 ವರ್ಷಗಳಾಗಿರುವ ಕಾರಣ ಸಾಧ್ಯವಾದಲ್ಲಿ ಹುಡುಕಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

**3.** ನೀವು ಸಲ್ಲಿಸಿರುವ ಭಾರತ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ಪ್ರಮಾಣ ಪತ್ರದಲ್ಲಿ

ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ನಡೆದ ಸಂಭಾಷಣೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಅದಕ್ಕೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನೀವು ಸಲ್ಲಿಸಿರುವ ಆ ದಾಖಲೆಗಳಲ್ಲಿ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ನಡೆದ ಸಂಭಾಷಣೆ ಎಂದು ನಮೂದಾಗಿರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ದಿನಾಂಕ ನಮುದಾಗಿರುತ್ತದೆ ಎಂದು ನುಡಿಯುತ್ತಾರೆ.

**ಪ್ರಶ್ನೆ:** ನಿ.ಪಿ.6 ರ ದಾಖಲೆಗಳು ಆರೋಪಿಗೆ ಸೇರಿದ ಸಂಭಾಷಣೆಯಾಗಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ?

**ಉತ್ತರ:** ಆರೋಪಿ ನೀಡಿರುವ ಮೊಬೈಲ್ ಸಂಖ್ಯೆ ಮೂಲಕ ಸಂಭಾಷಣೆ ನಡೆದಿದ್ದು, ಅವರು ನನಗೆ, ನಾನು ಅವರಿಗೆ ಸಂಭಾಷಣೆ ನಡೆಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

**4.** ನಿ.ಪಿ.6 ರ 8 ನೇ ಪುಟದಲ್ಲಿ ಸಂಭಾಷಣೆಯ ಎರಡು ಪದಗಳನ್ನು ಯಾರು ಹೊಡೆದು ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಎಂದು ನುಡಿಯುತ್ತಾರೆ. ಹೊಡೆದು ಹಾಕಿರುವ ಭಾಗದಲ್ಲಿ ಏನೆಂದು ನಮೂದಾಗಿತ್ತು ಎಂದರೆ ಸಾಕ್ಷಿಯು ಒಂದು ಪದ ರೂ.9,500/- ಮತ್ತೊಂದು ಪದ ರೂ.30,000/- ಎಂದು ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಹೊಡೆದು ಹಾಕಿರುವ ಪದಗಳಿರುವ ಸಂಪೂರ್ಣ ಭಾಗವನ್ನು ಓದಿರುತ್ತಾರೆ. ರೂ.9,500/-ಗಳ ಪ್ರಕರಣಕ್ಕೆ ರೂ.30,000/- ಗಳು ವಸೂಲಿ ಆಗಿದೆ ಎಂದು ಆ ಭಾಗದಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸಿಸಿ ನಂಬರ್ ತಿಳಿದಿದೆಯೇ ಎಂದರೆ ನಮ್ಮ ವಕೀಲರನ್ನು ಕೇಳಿ ನೀಡುತ್ತೇನೆ ಎಂದು

ನುಡಿಯುತ್ತಾರೆ. ನಿ.ಪಿ.6 ರಲ್ಲಿ ಎಲ್ಲಿಯೂ ಸಹ ಎಷ್ಟು ಮೊತ್ತ ಎಂದು ನಿರ್ದಿಷ್ಟವಾಗಿ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ.6 ರಲ್ಲಿ ನಮೂದಾಗಿರುವ ಮೊಬೈಲ್ ನಂಬರ್ ಆರೋಪಿಯದ್ದೇ ಆಗಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.